(ಇಂದು ದಿನಾಂಕ 06-04-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು -ವಾದಿ ಪರ ಶ್ರೀ ಪಿ.ಜಿ.ಎಚ್. ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿದ ಶಾಲೆಗಳಿಂದ ದಾಖಲಾತಿಯನ್ನು ಪಡೆದುಕೊಂಡು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಬಳಿ ಹಾಲಿ ಪ್ರಮಾಣಪತ್ರಗಳು ಶಾಲೆಯ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಇರುತ್ತವೆ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತುಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು 1 ನೇ ಪ್ರತಿವಾದಿಯು ಗೇಣಿ ನಾತೆಯಿಂದ ಸ್ವತ್ತುಗಳ ಸ್ವಾಧೀನಾನುಭವದಲ್ಲಿದ್ದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿಯು ಗೇಣಿನಾತೆಯಿಂದ / ರೈತನಾತೆಯಿಂದ ಸ್ವಾಧೀನದಲ್ಲಿ ಇದ್ದ ಬಗ್ಗೆ ನಾನು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ.

1 ನೇ ಪ್ರತಿವಾದಿಯು 1999 ನೇ ಸಾಲಿನಲ್ಲಿ ನನ್ನನ್ನು ದತ್ತಕಕ್ಕೆ ತೆಗೆದುಕೊಂಡಿದ್ದು, ನಿಖರವಾದ ದಿನಾಂಕ ಹೇಳಲು ಆಗುವುದಿಲ್ಲ. ದತ್ತಕ ತೆಗೆದುಕೊಂಡ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ವಾಸ್ತವ್ಯ ಇರಲಿಲ್ಲ, ನಾನು ಹಾಲಿ ಸುಮಾರು 12 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ನಾನು ಬೆಂಗಳೂರಿನಲ್ಲಿ ಇರುವ ಕಾರಣ ದಾವಾ ಸ್ವತ್ತುಗಳನ್ನು ಯಾರು ವಹಿವಾಟು ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಇರುವ ಕಾರಣ 1 ಮತ್ತು 2 ನೇ ಪ್ರತಿವಾದಿಗಳ ಸುಶ್ರೂಷೆಯನ್ನು ನಾನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ಆಗಾಗ್ಗೆ ಬಂದು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ಎಲ್ಲಾ ಮೊಮ್ಮಕ್ಕಳನ್ನು ಸಮಾನ ರೀತಿಯಲ್ಲಿ ಪ್ರೀತಿಸುತ್ತಿದ್ದರು ಎಂದರೆ

ಸರಿ. ದತ್ತಕ ಪತ್ರ ಮಾಡಲಾಯಿತು ಎಂದು ಹೇಳುವ ಸಂದರ್ಭದಲ್ಲಿ 1 ನೇ ಪ್ರತಿವಾದಿಯ ವಯಸ್ಸು ಎಷ್ಟು ಆಗಿತ್ತು ಎಂದು ಹೇಳಲು ಸಾಧ್ಯವಿದೆಯಾ ಎಂದರೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. 1 ಮತ್ತು2 ನೇ ಪ್ರತಿವಾದಿಯ ಜನನ ದಿನಾಂಕವನ್ನು ನಾನು ತಿಳಿದುಕೊಂಡಿರುವುದಿಲ್ಲ.

1 ನೇ ಪ್ರತಿವಾದಿಯು ಮಾಡಿರುವ ಮರಣ ಶಾಸನವನ್ನು ಅವರು ಅನಾರೋಗ್ಯ ಪೀಡಿತರಾಗಿ ಹಾಸಿಗೆ ಹಿಡಿದಿದ್ದ ಸಂದರ್ಭದಲ್ಲಿ ನಾನು ಬಂದಾಗ ಅವರು ನನಗೆ ಮರಣ ಶಾಸನ ಮಾಡಿರುವ ವಿಚಾರವನ್ನು ತಿಳಿಸಿ ಅದನ್ನು ನನಗೆ ನೀಡಿರುತ್ತಾರೆ. ನನ್ನ ಅಜ್ಜ ಅಂದರೆ 1 ನೇ ಪ್ರತಿವಾದಿಯು ದಿನಾಂಕಃ 08-11-2019 ರಂದು ಮೃತಪಟ್ಟಿರುತ್ತಾರೆ. ನನ್ನ ಪ್ರತಿವಾದ ಪತ್ರವದಲ್ಲಿ ನಾನು 1 ಮತ್ತು 2 ನೇ ಪ್ರತಿವಾದಿಯ ದತ್ತಕ ಮಗನಾಗಿರುವುದಾಗಿ ಹಾಗೂ ಮರಣ ಶಾಸನವನ್ನು 1 ನೇ ಪ್ರತಿವಾದಿಯು ಬರೆದುಕೊಟ್ಟಿರುವುದಾಗಿ ಪ್ರತಿಪಾದನೆ ಮಾಡಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿಯು ಮೃತಪಟ್ಟ ಸಮಯದಲ್ಲಿ ಅವರಿಗೆ ಸುಮಾರು 98 ರಿಂದ 99 ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿಯು ಮೃತಪಡುವ ಸುಮಾರು 25 ವರ್ಷಗಳಿಂದ ಪೂರ್ವದಿಂದ ಅವರಿಗೆ ದೃಷ್ಟಿ ಕಂಡುಬರುತ್ತಿರಲಿಲ್ಲ ಎಂದರೆ ಸಾಕ್ಷಿಯು ಅವರು ಸಾಯುವ 10 ವರ್ಷಗಳಿಂದ ಪೂರ್ವದಿಂದ 1 ನೇ ಪ್ರತಿವಾದಿಗೆ ಕಣ್ಣು ಕಾಣುತ್ತಿರಲಿಲ್ಲ ಹಾಗೂ ಕಿವಿ ಕೇಳಿಸುತ್ತಿರಲಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಮೃತಪಡುವ 10 ವರ್ಷಗಳ ಪೂರ್ವದಿಂದ ಮತ್ತೊಬ್ಬರ ಸಹಾಯದಿಂದ ಅವರು ಕೆಲಸಗಳನ್ನು ಮಾಡಿಕೊಳ್ಳುವ ಸ್ಥಿತಿ ಇತ್ತು ಎಂದರೆ ಸಾಕ್ಷಿಯು 5 ವರ್ಷಗಳಿಂದ ಮಾತ್ರ ಆ ರೀತಿ ಇದ್ದರು ಎಂದು ನುಡಿಯುತ್ತಾರೆ.

ನಾನು ಬೆಂಗಳೂರಿನಲ್ಲಿ ಇದ್ದ ಸಂದರ್ಭದಲ್ಲಿ 1 ನೇ ಪ್ರತಿವಾದಿಗೆ ಸೇರಿದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸಮಾಲೋಚನೆ ನಡೆಸುವುದಾಗಿ ಅಥವಾ ಅದರ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವುದಾಗಲೀ ಮಾಡಿರುವುದಿಲ್ಲ. ದತ್ತಕ ಪತ್ರ ಹಾಗೂ ಮರಣ ಶಾಸನವನ್ನು ಮಾಡಲಾದ

ದಿನಾಂಕಗಳನ್ನು ಹೇಳಲು ಸಾಧ್ಯವಿದೆಯಾ ಎಂದರೆ ಸಾಕ್ಷಿಯು ಮರಣ ಶಾಸನವನ್ನು 2019 ನೇ ಸಾಲಿನಲ್ಲಿ ಮಾಡಲಾಗಿದ್ದು, ದತ್ತಕ ಪತ್ರವನ್ನು 1999 ನೇ ಸಾಲಿನಲ್ಲಿ ಮಾಡಲಾಗಿದ್ದು, ನಿಖರವಾದ ದಿನಾಂಕವನ್ನು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ದತ್ತಕ ಪತ್ರ ಹಾಗೂ ಮರಣ ಶಾಸನವನ್ನು ನನ್ನ ತಂದೆಯವರೇ ಮುಂದಾಗಿ ನಿಂತು 1 ನೇ ಪ್ರತಿವಾದಿಯೊಂದಿಗೆ ಹೋಗಿ ನೋಂದಣಿ ಮಾಡಿಸಿರುತ್ತಾರೆ. ದತ್ತಕ ಪತ್ರ ಹಾಗೂ ಮರಣ ಶಾಸನವನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ಯಾರು ಯಾರು ಇದ್ದರು ಎಂಬ ಬಗ್ಗೆ ನಾನು ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ. ದತ್ತಕ ಪತ್ರ ಹಾಗೂ ಮರಣ ಶಾಸನದ ದಸ್ತಾವೇಜನ್ನು ಮಾಡಲು 1 ನೇ ಪ್ರತಿವಾದಿಗೆ ಹಕ್ಕು ಇತ್ತೋ ಇಲ್ಲವೋ ಎಂಬ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ. ದಾವಾ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿಗೆ ಯಾವ ರೀತಿಯ ಹಕ್ಕು ಇದೆ ಎಂಬುದನ್ನು ನಾನು ವಿಚಾರ ಮಾಡಿರುವುದಿಲ್ಲ.

ನಾನು ದಿನಾಂಕಃ 04-11-1999 ರಂದು ಬೆಂಗಳೂರಿನಿಂದ ಬಂದಿರುತ್ತೇನೆ. 1 ನೇ ಪ್ರತಿವಾದಿಯು ವಯೋ ಸಹಜತೆಯಿಂದ ಮೃತಪಟ್ಟಿದ್ದು, ಯಾವುದೇ ಅನಾರೋಗ್ಯದ ಕಾರಣ ಮೃತಪಟ್ಟಿರುವುದಿಲ್ಲ. 1 ನೇ ಪ್ರತಿವಾದಿಯು ಮೃತಪಡುವ 6 ತಿಂಗಳ ಪೂರ್ವದಿಂದ ಯಾರನ್ನೂ ಗುರುತಿಸುವ ಸಾಮರ್ಥ್ಯ ಹೊಂದಿರಲಿಲ್ಲ. ನಾನು ಬೆಂಗಳೂರಿನಿಂದ ಬರುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಹೆಣ್ಣು ಮಕ್ಕಳು ಹಾಗೂ 7 ನೇ ಪ್ರತಿವಾದಿ ಅವರ ಸುಶ್ರೂಷೆ ಮಾಡಿರುತ್ತಾರೆ ಎಂದರೆ ಸರಿ. ನಾನು ಬೆಂಗಳೂರಿನಿಂದ ದಿನಾಂಕಃ 04-11-1999 ರಂದು ಬಂದ ಸಂದರ್ಭದಲ್ಲಿ 1 ನೇ ಪ್ರತಿವಾದಿಯ ಮನೆಯಲ್ಲಿಯೇ ವಾಸ್ತವ್ಯ ಇದ್ದೆನು. ಹಿಂದೂ ಸಂಪ್ರದಾಯದಲ್ಲಿ ಮೃತ ವ್ಯಕ್ತಿಗೆ ಮಕ್ಕಳು ಇಲ್ಲದೇ ಇದ್ದ ಸಂದರ್ಭದಲ್ಲಿ ಇತರ ವ್ಯಕ್ತಿಗಳು ಅವರ ಕ್ರಿಯಾ ಕರ್ಮಗಳನ್ನು ಮಾಡುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಮೃತಪಟ್ಟಾಗ ನಾನು ಅವರ ದತ್ತಕ ಮಗನಾಗಿದ್ದೆನು. 1 ನೇ ಪ್ರತಿವಾದಿಯ ಕ್ರಿಯಾ ಕರ್ಮಗಳನ್ನು 7 ನೇ ಪ್ರತಿವಾದಿಯು ಮಾಡಿರುತ್ತಾರೆ. ಸಾಕ್ಷಿಯು ಮುಂದುವರಿದು ನನ್ನ

ತಂದೆ-ತಾಯಿ ಜೀವಂತ ಇದ್ದ ಕಾರಣ ಅಪರ ಕರ್ಮಗಳನ್ನು ನಾನು ಮಾಡುವುದು ಸೂಕ್ತ ಅಲ್ಲ ಎಂದು ತಿಳಿಸಿದ ಮೇರೆಗೆ 7 ನೇ ಪ್ರತಿವಾದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ದತ್ತಕ ಪಡೆದ ನಂತರ ನಾನು 1 ಮತ್ತು 2 ನೇ ಪ್ರತಿವಾದಿಯ ಮಗನಂತೆಯೇ ಬೆಳೆದು ಬಂದಿರುತ್ತೇನೆ. 1 ನೇ ಪ್ರತಿವಾದಿಯು ನನಗೆ ಮರಣ ಶಾಸನವನ್ನು ನೀಡಿದ ಸಂದರ್ಭದಲ್ಲಿ ನಾನು ಅದನ್ನು ಓದಿ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿಯು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ